ಶ್ರೀ ಬಿ. ಬಸವಲಿಂಗಪ್ಪ.—ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿ ಏನಾದರೂ ನ್ಯೂನತೆಗಳಿದ್ದರೆ ಸರಿಪಡಿಸೋಣ.

Complaints against Management of Comptrollers Office of Co operative Bank Ltd., Cubbonpet

277. Sri T. R. SHAMANNA (Fort).—

Will the Minister for Co-operation be pleased to state.—

(*a*) whether the Registrar of Co-operative Societies received any complaint petition against the management of the Comptrollers office of Co-operative Bank Ltd., No. 209 Cubbonpet, Bangalore and if so, when ;

(*b*) whether the items of maladministration and the financial irregularities of the management have been established ;

(*c*) if so, the action finally taken by the Registrar of Co-operative Societies to set right the maladministration etc., in accordance with the provisions of the MCS Act, 1959 ;

(*d*) the time taken by the Registrar of C.S. on the complaint petition and whether it has already been finalised ?

Sri A. SHANKARA ALVA (Minister for Co-operation).—

(*a*) Yes. On 1st May 1972.

(*b*) The matter is being enquired into.

(*c*) Enquiry under Section 64 of the M.C.S. Act, 1959 has been ordered by the Registrar of Co-operative Societies.

(*d*) Eight months ;

No.

ಶ್ರೀ ಟಿ. ಆರ್. ಶಾಮಣ್ಣ.—ಸಹಕಾರಿ ಇಲಾಖೆಗಳು ತಿಳಿಗಳನ್ನು ಪರಿಶೀಲನೆ ಮಾಡತಕ್ಕ ಕೆಲಸಗಾರರಿತಕ್ಕ ಸೊಸೈಟಿಯಲ್ಲಿ ಲೋಪದೋಷಗಳಿದ್ದರೆ ಅದನ್ನು ಆದಷ್ಟು ಬೇಗ ಸರಿಪಡಿಸುವುದು ಅತ್ಯಗತ್ಯವಲ್ಲವೇ ? ಎಂಟು ವರ್ಷವಾದರೂ ಕೂಡ ಯಾವ ಬಗೆಯ ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡು ತಪ್ಪುನೆಪ್ಪುಗಳನ್ನು ತಿದ್ದುವುದಕ್ಕೆ ಏಕೆ ಪ್ರಯತ್ನ ಮಾಡುವುದಕ್ಕಾಗಿಲ್ಲ ?

† ಶ್ರೀ ಎ. ಶಂಕರ ಆಳ್ವ.—ಅದಷ್ಟೂ ಪ್ರಯತ್ನ ಪಡುತ್ತಿದ್ದೇವೆ. ಮೊದಲು ಕಮಿಟಿಯನ್ನು ತೆಗೆಯಬೇಕೆಂದು ನೋಟೀಸ್ ಕೊಟ್ಟಿದ್ದೆವು. ಅದಾದ ನಂತರ ತನಿಖೆಯಾಯಿತು. ಆ ನಂತರ ಪರ್ಸನಲ್ ಹಿಯರಿಂಗ್ ಬೇಕು ಎಂದು ಮನವಿ ಮಾಡಿದರು. ಅವರ ಪ್ರಕಾರ ಪರ್ಸನಲ್ ಹಿಯರಿಂಗ್ ಮಾಡಿ ನಂತರ ಸಮಿತಿಯನ್ನು ತೆಗೆಯುವುದು ಆಗತ್ಯವಿಲ್ಲ ಎಂಬುವಾಗಿ ಅಭಿಪ್ರಾಯ ಪಟ್ಟರು. ಅವರೂ ಅಷ್ಟಿ ಸ್ವಲ್ಪ ದುರುಪಯೋಗವಾಗಿದೆ, ಕಟ್ಟಡವನ್ನು ಪಡೆದುಕೊಳ್ಳುವ ವಿಷಯದಲ್ಲಿ ಮತ್ತು ಅದರ ರಿಪೇರಿ ವಿಷಯದಲ್ಲಿ 71,129 ರೂಪಾಯಿಗಳಿಗೆ ಒಂದು ಕಟ್ಟಡವನ್ನು ತೆಗೆದುಕೊಂಡು ಅದಕ್ಕೆ 32,500 ರೂಪಾಯಿ ಖರ್ಚು ಮಾಡಿದ್ದಾರೆ. ಇವಕ್ಕೆಲ್ಲ ಸ್ಯಾಂಕ್ಷನ್ ತೆಗೆದುಕೊಳ್ಳಲಿಲ್ಲ. ಆ ವಿಷಯದಲ್ಲಿ ತನಿಖೆ ಎಲ್ಲ ಆಗುತ್ತಿದೆ. ಅವರ ಬಗ್ಗೆ ರಿಪೋರ್ಟ್ ಬಂದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಆ ಸೊಸೈಟಿಯಲ್ಲಿ ಹಣ ಲೋಪವಾಗಿದೆ ಎನ್ನುವ ಉದ್ದೇಶ ದಿಂದ ತೀವ್ರ ಕ್ರಮ ತೆಗೆದುಕೆ ಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ತನಿಖೆ ಮಾಡಲಿಕ್ಕೆ ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ನೇಮಕ ಮಾಡಿದ್ದೇವೆ. ಅವರ ರಿಪೋರ್ಟ್ ಬಂದ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಒಂದು ಸಂಘದ ವಿಚಾರವಾಗಿ ಒಂದು ಅರ್ಜಿ ಬಂದ ಮೇಲೆ ಅದರ ಬಗ್ಗೆ ಎಂಟು ತಿಂಗಳಾದರೂ ಇದರ ರಿಪೋರ್ಟ್ ಬರದೇ ಇದ್ದರೆ ಇದರಲ್ಲಾಗಿರುವ ಅನ್ಯಾಯ ಗಳನ್ನು ತಿಳಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂದ ಮೇಲೆ ಇಂತಹ ಸಂಘಗಳಲ್ಲಿ ಸರಕಾರ ದುರುಪಯೋಗವಾಗುವುದನ್ನು ಮುಂದೆ ತಡೆಯುವುದು ಕಷ್ಟವಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊದಲು ಇದರ ಬಗ್ಗೆ ಅರ್ಜಿ ಬಂತು, ಅರ್ಜಿ ಬಂದ ಕೂಡಲೆ ತನಿಖೆ ಮಾಡಬೇಕೆಂದು ಇದರಲ್ಲಿರುವ ಕಮಿಟಿ ತೆಗೆಯಬೇಕೆಂದೂ ಇತ್ತು. ಅನಂತರ ಬರೀ ತನಿಖೆ ಮಾಡಿದರೆ ಸಾಕು ಕಮಿಟಿ ತೆಗೆಯುವ ಅಗತ್ಯ ವಿಲ್ಲ ಎಂದು ರಿಜಿಸ್ಟ್ರಾರ್‌ರವರು ಸೆಕ್ಷನ್ 54 ಪ್ರಕಾರ ತನಿಖೆ ಮಾಡಲು ಸೂಚನೆ ಕೊಟ್ಟಿದ್ದಾರೆ. ಮತ್ತು ಇವುಗಳನ್ನು ಮಾಡುವುದರಲ್ಲಿ ಸ್ವಲ್ಪ ಸಾವಕಾಶವಾಗಿದೆ ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾವುದೇ ಕೆಲಸಕ್ಕಾಗಲೀ ಸಹಕಾರ ಸಂಘಗಳಿಗೆ ಸರಕಾರದ ಮಂಜೂರಾತಿ ಅವಶ್ಯಕವಾಗಿ ಬೇಕು. ಸರಕಾರ ಮಂಜೂರಾತಿ ಕೊಡುವುದರ ಬಗ್ಗೆ ಇಷ್ಟು ದಿನ ಗಳನ್ನು ಕೊಡಬೇಕೆಂದು ನಿಗದಿ ಮಾಡಿಸ್ಯಾರೆಯೇ ಇಲ್ಲವೇ ? ನಿರ್ದಿಷ್ಟವಾಗಿ ನಿಗದಿ ಮಾಡದೆ ಅನಿರ್ದಿಷ್ಟ ಕಾಲದವರೆಗೆ ಸರಕಾರದ ಮಂಜೂರಾತಿಗಾಗಿ ಸಹಕಾರ ಸಂಘಗಳು ಕಾಯುತ್ತ ಹೋದರೆ ಅದರ ಪ್ರಗತಿಗೆ ಧಕ್ಕೆಯಾಗುವುದಿಲ್ಲವೇ ? ಇದರ ಬಗ್ಗೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೀರಿ ?

ಶ್ರೀ ಎ. ಶಂಕರ ಆಳ್ವ.—ಎಷ್ಟು ಬೇಗ ಮಂಜೂರಾತಿ ಕೊಡಬೇಕೆಂದು ಇದೆ. ಕೆಲವು ಸಂದರ್ಭಗಳಲ್ಲಿ ಇವನ್ನು ಅಧಿಕಾರಿಗಳು ತನಿಖೆ ಮಾಡಬೇಕಾಗಿ ಬರಬಹುದು, ಹಾಗೆ ಸಾವಕಾಶ ಮಾಡಿದರೆ ಸರಕಾರಕ್ಕೆ ಇಲ್ಲವೇ ಮಂತ್ರಿಗಳಿಗೆ ಮನವಿ ಮಾಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಕಮಿಟಿ ಸದಸ್ಯರು ದುರುಪಯೋಗ ಮಾಡಿರುವುದರಿಂದ ಇವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಲು ಸೆಕ್ಷನ್ 61ರ ಪ್ರಕಾರ ಅವಕಾಶವಿದೆ. ಆ ರೀತಿ ಬೇಗನೆ ಇದರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದನ್ನು ಪರಿಶೀಲಿಸಿ ಸೆಕ್ಷನ್ 61ರ ಪ್ರಕಾರ ಯಾವ ಸದಸ್ಯರ ಮೇಲೆ ಆರೋಪ ಬರುತ್ತದೋ ಅವರ ಮೇಲೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾವ ಅನುಮಾನವೂ ಇಲ್ಲ.

Sri Lal Bahadur Shastry Market at Bijapur

473. Sri J. L. KABADI (Ballol i).—

Will the Minister for Municipal Administration be pleased to state :—

(*a*) whether it is a fact that Sri Lalbahadur Shastry Market at Bijapur is going to be constructed shorty;

(*b*) if so, when it will be completed;

(*c*) the arrangement that will be made to the Cobblers who are having their shops already at the time of construction of this market;

(*d*) after construction of this market whether Government is going to give built shops to the Cobblers who are residing there;